ಕರ್ನಾಟಕ ಸರ್ಕಾರ
ಜಲಸಂಪನ್ಮೂಲ ಇಲಾಖೆ

ಸಂಖ್ಯೆ:ಜಸಅ/30/ಇಎಸ್‌ಎಂ/ಕಿಇಂಹೈಕನೇ/2026

ಮುಖ್ಯ ಇಂಜಿನಿಯರ್ ರವರ ಕಛೇರಿ,
ಜಲ ಸಂಪನ್ಮೂಲ ಇಲಾಖೆ,
ಆನಂದರಾವ್ ವೃತ್ತ, ಬೆಂಗಳೂರು.

ದಿನಾಂಕ: 18 JUL 2026

ಸೂಚನಾ ಪತ್ರ

ಇವರಿಗೆ,

[redacted]

ವಿಷಯ: ಜಲಸಂಪನ್ಮೂಲ ಇಲಾಖೆಯ ಕಿರಿಯ ಇಂಜಿನಿಯರ್ ಉಳಿಕೆ ಮೂಲ ವೃಂದದ (ಸಿವಿಲ್) -216+54 ಹುದ್ದೆಗಳಿಗೆ ಸಂಬಂಧಿಸಿದಂತೆ, ಆಯ್ಕೆಯಾಗಿರುವ ಅಭ್ಯರ್ಥಿಗಳ ಮೂಲ ದಾಖಲಾತಿಗಳ ಪರಿಶೀಲನೆ ಕುರಿತು.

ಉಲ್ಲೇಖ: ಕರ್ನಾಟಕ ಲೋಕ ಸೇವಾ ಆಯೋಗ, ಬೆಂಗಳೂರು ಇವರ ಆಯ್ಕೆ ಪಟ್ಟಿಯ ಅಧಿಸೂಚನೆ ಸಂಖ್ಯೆ: KPSCKA/RCTF/1/2026-RCT-2/281902/164 ದಿನಾಂಕ: 09/07/2026.

****

ಉಲ್ಲೇಖಿತ ಅಧಿಸೂಚನೆಯನ್ವಯ, ಜಲ ಸಂಪನ್ಮೂಲ ಇಲಾಖೆಯಲ್ಲಿ ಉಳಿಕೆ ಮೂಲ ವೃಂದದ ಕಿರಿಯ ಇಂಜಿನಿಯರ್ (ಸಿವಿಲ್) ಹುದ್ದೆಯಲ್ಲಿ 216+54 ಆಯ್ಕೆಯಾಗಿರುವ ಅಭ್ಯರ್ಥಿಗಳ ಇ-ಸಿಂಧುತ್ವ, ವಯಸ್ಸು, ವಿದ್ಯಾರ್ಹತೆ, ವೈದ್ಯಕೀಯ ಪ್ರಮಾಣ ಪತ್ರ ಹಾಗೂ ಪೊಲೀಸ್ ಪರಿಶೀಲನಾ ವರದಿ ಮತ್ತು ಮೀಸಲಾತಿಯ ಬಗ್ಗೆ ಮೂಲ ದಾಖಲೆಗಳ ನೈಜತೆಯನ್ನು ದಿನಾಂಕ: 03-08-2026 ರಂದು ಈ ಕೆಳಕಂಡ ಮೂಲ ದಾಖಲೆಗಳೊಂದಿಗೆ, ಎರಡು (2) ಸೆಟ್ ಸ್ವಯಂ ದೃಢೀಕೃತ ಜೆರಾಕ್ಸ್ ಪ್ರತಿಗಳೊಂದಿಗೆ, ಪರಿಶೀಲನೆಗೆ ತಪ್ಪದೇ, ಈ ಕಛೇರಿಗೆ ಹಾಜರಾಗತಕ್ಕದ್ದೆಂದು ತಿಳಿಸಲಾಗಿದೆ.

1. ಲೋಕಸೇವಾ ಆಯೋಗಕ್ಕೆ ಸಲ್ಲಿಸಿದ್ದ ಅರ್ಜಿ/ಸ್ವೀಕೃತಿ.
2. ವಿದ್ಯಾರ್ಹತೆಯ ಎಲ್ಲಾ ಸೆಮಿಸ್ಟರ್/ವರ್ಷಗಳ ಅಂಕಪಟ್ಟಿಗಳು.
3. Diploma Convocation Certificate.
4. ಎಸ್.ಎಸ್.ಎಲ್.ಸಿ. ಮತ್ತು ಪದವಿ ಪೂರ್ವ ಅಂಕಪಟ್ಟಿಗಳು.
5. ಜಾತಿ ಪ್ರಮಾಣಪತ್ರ (ಅನ್ವಯವಾಗುವಲ್ಲಿ).
6. 371ಜೆ ಗೆ ಸಂಬಂಧಿಸಿದ ಪ್ರಮಾಣಪತ್ರ (ಅನ್ವಯವಾದಲ್ಲಿ)
7. ಇಬ್ಬರು ಗಣ್ಯ ವ್ಯಕ್ತಿಗಳಿಂದ ಮತ್ತು ಶಾಲಾ/ಕಾಲೇಜು ನಡತೆ ಪ್ರಮಾಣಪತ್ರಗಳು(ಇತ್ತೀಚಿನ -06 ತಿಂಗಳೊಳಗೆ ಪಡೆದಿರಬೇಕು)
8. ಕನ್ನಡ ಮಾಧ್ಯಮ/ಮಾಜಿ ಸೈನಿಕ/ಗ್ರಾಮೀಣ ಅಭ್ಯರ್ಥಿ/ಯೋಜನಾ ನಿರಾಶ್ರಿತ ಅಭ್ಯರ್ಥಿ/ಅಂಗ ವಿಕಲ ಪ್ರಮಾಣಪತ್ರಗಳು (ಅನ್ವಯವಾಗುವಲ್ಲಿ).
9. ಇತ್ತೀಚಿನ ಭಾವಚಿತ್ರ (ಪಾಸ್‌ಪೋರ್ಟ್ ಅಳತೆ)-2 ಸಂಖ್ಯೆ.
10. ಲೋಕಸೇವಾ ಆಯೋಗಕ್ಕೆ ಅರ್ಜಿ ಸಲ್ಲಿಸುವಾಗ ಸಲ್ಲಿಸಿರುವ ಇನ್ನಿತರೆ ಎಲ್ಲಾ ದಾಖಲಾತಿಗಳು.

11. ಭಾವಚಿತ್ರ ಮತ್ತು ಮನೆ ವಿಳಾಸ ಸಮರ್ಥಿಸುವ ದಾಖಲೆ ಪ್ರತಿ(ಆಧಾರ್/ಚಾಲನಾ ಪರವಾಗಿ/ಪಾಸ್ ಪೋರ್ಟ್/ ಮತದಾರರ ಗುರುತಿನ ಚೀಟಿ/ ಪಡಿತರ ಚೀಟಿ- ಇವುಗಳಲ್ಲಿ ಯಾವುದಾದರೂ ಒಂದು).
12. ಸರ್ಕಾರಿ ನೌಕರರಾಗಿದ್ದಲ್ಲಿ, ನೇಮಕಾತಿ ಪ್ರಾಧಿಕಾರದಿಂದ ಪಡೆದ ನಿರಾಕ್ಷೇಪಣಾ ಪ್ರಮಾಣ ಪತ್ರವನ್ನು ಹುದ್ದೆಗೆ ಅರ್ಜಿ ಸಲ್ಲಿಸುವ ಮೊದಲೇ ಪಡೆದಿರುವ ಪ್ರಮಾಣ ಪತ್ರ (No Objection Certificate)
13. ಆಧಾರ್ ಕಾರ್ಡ್ ಪ್ರತಿ.

ತಮ್ಮ ನಂಬುಗೆಯ,

ಮುಖ್ಯ ಇಂಜಿನಿಯರ್,ರವರ ಪರವಾಗಿ
ಜ.ಸಂ.ಇಲಾಖೆ, ಬೆಂಗಳೂರು.

17/7/26

(ಕರಡು ಪ್ರತಿಯು ಮು.ಇಂ ರವರಿಂದ ಅನುಮೋದಿಸಲ್ಪಟ್ಟಿದೆ.)

17/07/2026